


International Journal of Kannada Research
www.kannadajournal.com

**ISSN: 2454–5813**
IJKR 2025; 11(3): 37-40
© 2025 IJKR
www.kannadajournal.com
Received: 12-05-2025
Accepted: 09-06-2025

**ಶ್ರೀ.ಶ್ರೀಶೈಲ**
ಶ್ರೀ. ಜಿ. ಆರ್. ಗಾಂಧಿ ಕಲಾ, ಶ್ರೀ. ವೈ. ಎ. ಪಾಟೀಲ್ ವಾಣಿಜ್ಯ ಮತ್ತು ಶ್ರೀ. ಎಂ. ಎಫ್. ದೋಷಿ ವಿಜ್ಞಾನ ಪದವಿ ಕಾಲೇಜು, ವಿಜಯಪುರ, ಕರ್ನಾಟಕ, ಭಾರತ

**Corresponding Author:**
**ಶ್ರೀ.ಶ್ರೀಶೈಲ**
ಶ್ರೀ. ಜಿ. ಆರ್. ಗಾಂಧಿ ಕಲಾ, ಶ್ರೀ. ವೈ. ಎ. ಪಾಟೀಲ್ ವಾಣಿಜ್ಯ ಮತ್ತು ಶ್ರೀ. ಎಂ. ಎಫ್. ದೋಷಿ ವಿಜ್ಞಾನ ಪದವಿ ಕಾಲೇಜು, ವಿಜಯಪುರ, ಕರ್ನಾಟಕ, ಭಾರತ

# ಸರ್ವಜ್ಞನ ತ್ರಿಪದಿಗಳಲ್ಲಿ ಸಾಮಾಜಿಕ ವಿಡಂಬನೆ

**ಶ್ರೀ.ಶ್ರೀಶೈಲ**

**ಪೀಠಿಕೆ.**

'ಕನ್ನಡದ ಮೊದಲ ನೀತಿ ಕವಿ' ಎಂದೇ ಸುಪ್ರಸಿದ್ದನಾಗಿದ್ದ ಸರ್ವಜ್ಞ ಕನ್ನಡ ಕಾವ್ಯ ಪರಂಪರೆಯ ಪ್ರಮುಖ ದಾರ್ಶನಿಕ ಕವಿಗಳಲ್ಲಿ ಒಬ್ಬ. ಅಚ್ಚಗನ್ನಡ ದೇಶಿ ಛಂದಸ್ಸಾದ ತ್ರಿಪದಿಯನ್ನು ಶಿಷ್ಟಕಾವ್ಯದ ಸಮರ್ಥ ಮಾಧ್ಯಮವನ್ನಾಗಿ ಮಾಡಿಕೊಂಡು, ಕನ್ನಡ ಸಾಹಿತ್ಯದಲ್ಲಿ ತ್ರಿಪದಿಗೊಂದು ಮೂರ್ತಸ್ವರೂಪ ತಂದುಕೊಟ್ಟು ಅದರ ಆದ್ಯ ಪ್ರವರ್ತಕನಾದವನು ಸರ್ವಜ್ಞ; ಅಂತೆಯೇ ಸರ್ವಜ್ಞನನ್ನು 'ತ್ರಿಪದಿ ಸಾರ್ವಭೌಮ', 'ತ್ರಿಪದಿ ಸಾಮ್ರಾಜ್ಯದ ಚಕ್ರವರ್ತಿ', 'ತ್ರಿಪದಿ ಸಾಹಿತ್ಯದ ಜನಕ' ಎಂದೆಲ್ಲ ಕರೆದು ಗೌರವಿಸಲಾಗುತ್ತಿದೆ. ಸರ್ವಜ್ಞನ ತ್ರಿಪದಿಗಳು 'ಮುಕ್ತಕ', 'ವಚನ' ಎಂದೇ ಸುಪ್ರಸಿದ್ದ. ಈತನ ತ್ರಿಪದಿಗಳ ಅಂಕಿತ ಸರ್ವಜ್ಞ. ಸರ್ವಜ್ಞ ಅಪಾರ ಲೋಕಾನುಭವದ ಪ್ರಮುಖ ನೀತಿಕವಿ. ನೀತಿ ಪ್ರತಿಪಾದನೆಗಾಗಿಯೇ ಈತ ಕಾವ್ಯ ಬರೆದವನೇನಲ್ಲ. ಆದರೆ ಈತ ಬರೆದದ್ದು 'ನೀತಿಕಾವ್ಯ'ವಾಯಿತು ! ತನ್ನ ತ್ರಿಪದಿಗಳ ಮೂಲಕ ಸಾಮಾಜಿಕ ಅನಿಷ್ಟಗಳನ್ನೂ, ಸಮಾಜವನ್ನೂ ತಿದ್ದಲು ಪ್ರಯತ್ನಿಸಿದ ಸರ್ವಜ್ಞ ಒಬ್ಬ ಸಮಾಜವೈದ್ಯನಾಗಿ ಕಂಡುಬರುತ್ತಾನೆ. ಆಡುಮುಟ್ಟದ ಸೊಪ್ಪಿಲ್ಲ ಸರ್ವಜ್ಞ ಹೇಳದ ವಿಷಯವಿಲ್ಲ ಎನ್ನುವಂತೆ ಧರ್ಮ, ದೈವ, ಆಧ್ಯಾತ್ಮ, ಕಾಲಜ್ಞಾನ, ಜ್ಯೋತಿಷ, ನೀತಿ, ದಾನ, ಯೋಗ, ಕಲೆ, ಶಿಕ್ಷಣ, ವ್ಯವಹಾರ ಹೀಗೆ ವೈವಿಧ್ಯಮಯವಾದ ವಿಷಯಗಳನ್ನು ಜಂಗಮಕವಿಯಾದ ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಹರವಿದ್ದಾನೆ. ಅವನು ಜನತೆಯನ್ನುದ್ಧರಿಸಬೇಕೆಂಬ ಉದ್ದೇಶದಿಂದ ತ್ರಿಪದಿಗಳನ್ನು ರಚಿಸಿದ್ದು ಅವುಗಳಲ್ಲಿ ಮಾನವೀಯ ಅನುಕಂಪವಿದೆ, ಉನ್ನತ ಅಧ್ಯಾತ್ಮಿಕ ಮೌಲ್ಯಗಳ ಪ್ರತಿಪಾದನೆಯಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜೀವನದ ಸಮಸ್ಯೆಗಳ ನೇರ ನಿರೂಪಣೆಯಿದೆ. ಆತ ಒಳಿತನ್ನು ಕಂಡಲ್ಲಿ ತಲೆಬಾಗಿದ ಕೆಡುಕನ್ನು ಕಂಡಲ್ಲಿ ತೆಗಳಿದ; ವಿಡಂಬಿಸಿದ. ಅವನ ವಿಡಂಬನೆಯ ವ್ಯಾಪ್ತಿ ವಿಶಾಲವಾದದ್ದು. ವ್ಯಕ್ತಿಗಳ ವೈಯಕ್ತಿಕ ಡಂಬಾಚಾರಗಳಿಂದ ಹಿಡಿದು ಸಮುದಾಯದ ಡಂಬಾಚಾರಗಳವರೆಗೆ ಎಲ್ಲರನ್ನೂ ವಿಡಂಬಿಸಿದ್ದಾನೆ. ಸರ್ವಜ್ಞನು ಸಾಮಾಜಿಕ ಅನ್ಯಾಯಗಳು, ಮೂಡನಂಬಿಕೆಗಳು ಮತ್ತು ಜನರ ವ್ಯವಹಾರಗಳ ಅಸಂಬದ್ಧತೆಯನ್ನು ವ್ಯಂಗ್ಯದ ಮೂಲಕ ವಿಡಂಬಿಸುತ್ತಾನೆ.

ಉಣ ಬಂದಲಿಂಗಕ್ಕೆ । ಉಣಲಿಕ್ಕದಂತರಿಸಿ
ಉಣದಿರ್ಪ ಲಿಂಗಕ್ಕುಣ ಬಡಿಸಿ –ಕೈಮುಗಿವ
ಬಣಗುಗಳ ನೋಡ ಸರ್ವಜ್ಞ॥

ಈ ತ್ರಿಪದಿಯಲ್ಲಿ ಸರ್ವಜ್ಞನು ಬಾಹ್ಯಾಚರಣೆಯ ವಿರೋಧವನ್ನು ಸೂಚಿಸುತ್ತಿದ್ದಾನೆ, ಮಾನವ ಸೇವೆಯೇ ಮಹಾ ಸೇವೆ ಎಂಬ ನೈಜ ದಾರ್ಶನಿಕ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಿದ್ದಾನೆ. ಹೆಸರಿಗಾಗಿ, ತೋರಿಕೆಗಾಗಿ, ಜನತೆಗೆ ತೋರಿಸಬೇಕೆಂಬ ತವಕದಿಂದ ಕೆಲವರು ದೇವರಿಗೆ ನೈವೇದ್ಯ ಹಾಕುತ್ತಾರೆ ಇದು ಬಾಹ್ಯಾಚರಣೆ ಇಂತಹ ತೋರಿಕೆಯ ಪೂಜೆಗಳಿಂದ ಏನು ಪ್ರಯೋಜನ? ಬಡವರು ಹಸಿವಿನಿಂದ ನರಳುತ್ತಿರುವಾಗ ದೇವರ ಮುಂದೆ ಕೈ ಮುಗಿಯುವುದು ಧರ್ಮವೇ? ಇದು ಒಂದು ವ್ಯಂಗ್ಯಾತ್ಮಕ ಪ್ರಶ್ನೆಯಾಗಿದೆ. ಅವನ ಪ್ರಕಾರ ಹಸಿದವನಿಗೆ ಉಣ್ಣಲಿಕ್ಕದೆ ಉಣ್ಣದ ಲಿಂಗಕ್ಕೆ ಉಣಬಡಿಸುವವರು ಅಲ್ಪರು. ಬಸವಣ್ಣನವರೂ ಇದನ್ನೇ ಹೇಳಿದ್ದಾರೆ.

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು

ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ
ಉಂಬಜಂಗಮ ಬಂದಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ.

ಮನದಲ್ಲಿ ಪಾಪವನ್ನು ತುಂಬಿಕೊಡು, ಕೊಲ್ಲವ ಕೈಯಲ್ಲಿ ಪೂಜಿಸುತ್ತಾ, ಕೊಂದದ್ದನ್ನು ತಿನ್ನುವ ಬಾಯಲ್ಲಿ ಮಂತ್ರವನ್ನು ಜಪಿಸುವವನು ಹೊಲೆಯನಿಗಿಂತಲೂ ನಿಕೃಷ್ಟ. ಶಿವಪೂಜೆಯ ನೆಪದಲ್ಲಿ ಎತ್ತುವ ಆರತಿ ಹಾಳೂರ ಕೊಟ್ಟಿಗೆಗೆ ಬೆಂಕಿಯಿಟ್ಟು ಉರಿಯನೆಬ್ಬಿಸುವಂತಹುದು. ತನ್ನೊಳಗಿನ ಲಿಂಗವನ್ನು ಮನ್ನಿಸಲರಿಯದೆ ಶಿಲ್ಪಿಗಳು ಕೆತ್ತಿ ನಿಲ್ಲಿಸಿದ ಪ್ರತಿಮೆಗಳಿಗೆ ಎರಗುವವನು ಅನ್ಯಾಯಕಾರಿ. ನೆಟ್ಟ ಕಲ್ಲಿಗೆ, ಒಟ್ಟಿದ ಮಣ್ಣು ಗುಡ್ಡೆಗೆ ಕಟ್ಟಿಕೊಂಡ ಲಿಂಗದಸಮೇತ ಅಡ್ಡ ಬೀಳುವವನಿಗೆ ಇಷ್ಟಾರ್ಥ ಸಿದ್ಧಿಯಗುವುದಿಲ್ಲ ಎಂದು ನೇರವಾಗಿ ಖಂಡಿಸಿದ್ದಾನೆ. ಅರ್ಥವಿಲ್ಲದ ಬಾಹ್ಯಾಚರಣೆಗಳೂ, ಸುಳ್ಳು, ಮೋಸಗಳೂ ಸರ್ವಜ್ಞನ ವಿಡಂಬನೆಗೆ ಗುರಿಯಾಗಿವೆ. ಸುಳ್ಳುಗಾರ ದೇವಾಲಯದತ್ತ ತಿರುಗಿ ತಲೆಯೆತ್ತಿ ಕೈಮುಗಿದರೆ ಇಷ್ಟುದ್ದಕ್ಕೆ ಸುಳ್ಳು ಹೇಳುತ್ತೇನೆ ಎಂದು ದೇವರಿಗೆ ನಿವೇದಿಸಿಕೊಂಡಂತಾಗುತ್ತದೆ. ಮನದಲ್ಲಿ ಶಿವನನ್ನು ನೆನೆಯದೆ ದೇಗುಲವನ್ನು ಸುತ್ತಿ ಬಂದರೆ ಎತ್ತುಗಾಣದ ನೊಗವನ್ನು ಹೊತ್ತು ಗಾಣವನ್ನು ಸುತ್ತಿದಂತಾಗುತ್ತದೆ. ಪ್ರಾಣ ಜಂಗಮವೆಂದು ಹೇಳಿಕೊಳ್ಳುತ್ತಾ ಜಂಗಮಕ್ಕಿದೆ ಕೋಣೆಯಲ್ಲಿ ತಾನೊಬ್ಬನೇ ಉಣ್ಣುವವನು ಮರುಳ ಎಂದು ಭಕ್ತಿ ಸುಳ್ಳುಗಾರನನ್ನೂ, ಬಾಹ್ಯಾಚರಣೆಯಲ್ಲಿ ತೊಡಗಿರುವವನನ್ನೂ, ನುಡಿದಂತೆ ನಡೆದುಕಳ್ಳದವರನ್ನೂ ವಿಡಂಬಿಸಿದ್ದಾನೆ. ದ್ವಿಜರ ಡಂಬಾಚಾರವಂತೂ ಅವನ ಕಟುವಿಡಂಬನೆಗೆ ಒಳಗಾಗಿವೆ

ಹಿರಿದು ಪಾಪವ ಮಾಡಿ । ಹರಿವರು ಗಂಗೆಗೆ
ಹರಿವ ನೀರಲ್ಲಿ ಕರಗುವೊಡೆ ಯಾ ಪಾಪ
ಎರೆಯ ಮಣ್ಣಲ್ಲ ಸರ್ವಜ್ಞ।

ಹಿರಿದು ಪಾಪವನ್ನು ಮಾಡಿ ಮಿಂದು ಶುದ್ಧಿಯಾಗಲೆಂದು ಗಂಗೆಗೆ ಓಡುತ್ತಾರೆ. ಹರಿವ ನೀರಲ್ಲಿ ತೊಳೆದು ಕರಗಿ ಹೋಗುವದಕ್ಕೆ ಆ ಪಾಪ ಮೈಗೆ ಮೆತ್ತಿಕೊಂಡ ಎರೆಮಣ್ಣಲ್ಲ ಎಂದು ಟೀಕಿಸಿದ್ದಾನೆ. ಅಂತೆಯೇ ಮತ್ತೊಂದು ತ್ರಿಪದಿಯಲ್ಲಿ

ಗಾಯತ್ರಿ ವೇದಕ್ಕೆ । ತಾಯಿ ಎಂದೆನಿಸುತ್ತು
ವಾಯಕ್ಕೆ ದ್ವಿಜರು ಹಲವು ಕೊಂಬಿಗೆ ತಾವು
ಹಾಯುತಿಹರೇಕೆ ಸರ್ವಜ್ಞ॥

ಈ ತ್ರಿಪದಿಯಲ್ಲಿ ಸರ್ವಜ್ಞನು ಧರ್ಮ ಮತ್ತು ಶಾಸ್ತ್ರಪಾಠದ ಹೆಸರಿನಲ್ಲಿ ನಡೆಯುವ ವಿಭಜನೆ ಮತ್ತು ದ್ವಂದ್ವವನ್ನು ತೀಕ್ಷ್ಣವಾಗಿ ಪ್ರಶ್ನಿಸುತ್ತಾರೆ. ಗಾಯತ್ರಿ ಮಂತ್ರವು ವೇದಗಳಿಗೆ ತಾಯಿ ಎನ್ನಲಾಗುತ್ತದೆ. ಅದೇನೆಂದರೆ, ಎಲ್ಲಾ ವೇದಗಳ ಮೂಲ. ಆದರೂ ಕೂಡಾ ವೇದಗಳನ್ನು ಪಠಿಸುವ ದ್ವಿಜ ವರ್ಗದವರು ವೇದದ ವಿವಿಧ ರೂಪಗಳನ್ನು, ಪಂಥಗಳನ್ನು ನಿರ್ಮಿಸಿ ಪರಸ್ಪರ ವೈಮನಸ್ಸು ತೋರಿಸುತ್ತಿದ್ದಾರೆ. ಸರ್ವಜ್ಞನು ಇಲ್ಲಿ ವ್ಯಂಗ್ಯಶೈಲಿಯಲ್ಲಿ ಕೇಳುತ್ತಾನೆ–ಎಲ್ಲರೂ ಒಂದೇ ಮೂಲವಾದ ಗಾಯತ್ರಿಯನ್ನು ಅಂಗೀಕರಿಸುತ್ತಿರುವಾಗ, ವೇದದ ಪ್ರಭಾವವನ್ನೆಲ್ಲರೂ ಒಪ್ಪಿಕೊಂಡಿರುವಾಗ ತಮ್ಮದೇ ಆದ ಕೊಮಾಭಿಗಳಂತೆ ಒಬ್ಬೊಬ್ಬರು ಏಕೆ ಹಾಯುತ್ತಿರುವರು? ಏಕೆ ವೈಷಮ್ಯ ತೋರುತ್ತಿದ್ದಾರೆ? ಒಟ್ಟಿನಲ್ಲಿ ಸರ್ವಜ್ಞನು ಧರ್ಮದಲ್ಲಿ ಏಕತೆ, ಸಮಾನತೆ, ಸಹಿಷ್ಣುತೆ ಮತ್ತು ವಿವೇಕದ ಅಗತ್ಯವಿದೆ ಎಂಬ ಸಂದೇಶವನ್ನು ನೀಡುತ್ತಾನೆ. ಧರ್ಮವೆಂಬುದು ವಿಭಜನೆಯಲ್ಲ ಬುದ್ಧಿವಂತಿಕೆಯ ಮಾರ್ಗವಾಗಿರಬೇಕು ಎಂಬ ಅಡಗುಬರಹ ಇಲ್ಲಿದೆ. ತೇದ ಗಂಧವನ್ನು ಹಣೆಗಿಟ್ಟುಕೊಂಡಕ್ಷಣ ನೆಟ್ಟನೆ ಸ್ವರ್ಗಕ್ಕೆ ಹೋಗುವುದಾದರೆ ಗಂಧವನ್ನು ತೇಯುವ ಸಾಣೆಕಲ್ಲು ಏಕೆ ಸ್ವರ್ಗಕ್ಕೆ ಹೋಗಬಾರದು? ಮೂರಳೆಯ ಜನಿವಾರವನ್ನು ಧರಿಸಿದವನು ಸ್ವರ್ಗಕ್ಕೆ ಹಾರುವದಾದರೆ ನೂರೆಂಟು ಎಳೆಯ ಕೌದಿಯನ್ನು ಹೊದ್ದವನು ಏಕೆ ಸ್ವರ್ಗಕ್ಕೆ ಹಾರಬಾರದು? ವಿಪ್ರರು ಎಂಜಲೆಂಜಲು ಎಂದು ಅಂಜುವರು ಅವರ ದೇಹ ಎಂಜಲಿಂದಾದದ್ದು ಎಂಬ ಪರಿಜ್ಞಾನ ಅವರಿಗಿಲ್ಲ .ಯಾಗದ ನೆಪದಿಂದ ಆಡಿನ ಬಾಡನ್ನು ತೂಗಿ ತಿನ್ನುತ್ತಾರೆ. ಯಾಗಕ್ಕೆ ಮಹಿಮೆಯಿದ್ದರೆ ಹೋತುಗಳನೇಕೆ ಕೊಲ್ಲಬೇಕು? ಯಜ್ಞ ವಿದ್ಯೆಯೆಂದು ಕನ್ನೆ ಆಡನ್ನು ತಿಂದು ಉನ್ನತ ಸ್ವರ್ಗವನ್ನಡರುವುದಾದರೆ ಹಿಂಡು ಹಿಂಡು ಕುರಿಗಲನ್ನು ತಿನ್ನುವಾತ ಏಕೆ ಸ್ವರಗಕ್ಕೇರಬಾರದು? ಹಾರುವರು ಸ್ವರ್ಗದ ದಾರಿಯನ್ನೆಕೆ ಬಲ್ಲರು ? ಹೊಲೆಯನದು ಕೊಂದು ತಿನ್ನುವುದಿಲ್ಲವೆಂಬ ಪ್ರತಿಜ್ಞೆ ಆದ್ದರಿಂದ ಅವನು ಸಂದುದನ್ನು ಮಾತ್ರ ತಿನ್ನುತ್ತಾರೆ ಆದರೆ ಹಾರುವರು ಕೊಂದು ತಿನ್ನುತ್ತಾರೆ. ಸತ್ತುದನ್ನು ತಿನ್ನುವಾತನೆತ್ತನ ಹೊಲೆಯ? ಹೀಗೆ ಅನೇಕ ತ್ರಿಪದಿಗಳ ಮೂಲಕ ಸರ್ವಜ್ಞ ಸಮಾಜದ ಮೇಲ್ವರ್ಗದವರನ್ನು ಕಟುವಾಗಿ ಖಂಡಿಸಿದ್ದಾನೆ. ವಿಪ್ರರ ಡಂಬಾಚಾರ ಮಾತ್ರವಲ್ಲದೆ ಜೈನಯತಿಗಳ ಡಂಬಾಚಾರವೂ ಸರ್ವಜ್ಞನ ವಿಡಂಬನೆಗೆ ಗುರಿಯಾಗಿವೆ.

ಹೆರೆ ಪೋದಡುರಗನ । ಗರಲ ತಾ ತಪ್ಪುವುದೆ
ಪರತತ್ವ ಬೋಧೆಯರೆಯದೆ –ಗುರುಗಳು
ಸಿರಿಯ ತೊರೆದೇನು ಸರ್ವಜ್ಞ

ಸರ್ವಜ್ಞನು ಈ ತ್ರಿಪದಿಯಲ್ಲಿ ಬಹುಮೌಲ್ಯಪೂರ್ಣ ತಾತ್ವಿಕ ಮೌಲ್ಯವನ್ನು ಅತ್ಯಂತ ಸರಳ ಶೈಲಿಯಲ್ಲಿ ಪ್ರಕಟಿಸುತ್ತಾನೆ. ಇಲ್ಲಿ 'ಹಾವು' ಉಪಮಾನವಾಗಿ ಬರುತ್ತದೆ. ಹಾವು ತನ್ನ ಚರ್ಮ ಬದಲಾಯಿಸಿದರೂ ಅದರ ವಿಷವಂತೂ ಹಾಗೇಯಿರತ್ತದೆ. ಇದರ ಮೂಲಕ ಸರ್ವಜ್ಞ್ ಹೇಳಲು ಉದ್ದೇಶಿಸುವುದೇನೆಂದರೆ; ಗುರು ಅಥವಾ ತತ್ವೋಪದೇಶಕನು ಹೊರಗೆ ಬದಲಾಗಿದ್ದರೂ ಒಳಗೆ ಅಹಂಕಾರ, ಕಪಟ, ದುರಾಚಾರವಿದ್ದರೆ ಅವನಿಂದ ಸತ್ಯದ ಬೋಧನೆ ಸಾಧ್ಯವಿಲ್ಲ. ಇಲ್ಲಿ 'ಪರತತ್ವ' ಎಂದರೆ ಪರಮ ಸತ್ಯ – ಇದು ಜ್ಞಾನ, ಅನುಭವ ಮತ್ತು ನೈತಿಕ ಶುದ್ಧತೆಯಿಂದ ಬರುವುದಾದ್ದರಿಂದ ಬೋಧಕರಿಗೆ ಆಂತರಿಕ ಶುದ್ಧತೆ ಅಗತ್ಯವಿದೆ. ಬಾಹ್ಯ ರೂಪಾಂತರ ಮಾತ್ರವಲ್ಲ ಶುದ್ಧಮನಸ್ಸು, ನೈತಿಕ ನೀತಿ ಮತ್ತು ಜ್ಞಾನದ ಪರಿಪಕ್ವತೆ ಬೇಕು. ಇಲ್ಲದೆ ಹೊದರೆ ತತ್ವಜ್ಞಾನವೆಂಬ 'ಸಿರಿ' ದೊರೆಯುವುದಿಲ್ಲ. ಇದು ನಮ್ಮ ಆಚಾರವೆಂದು ಕೂದಲು ಕಿತ್ತುಕೊಂಡು ಕಮಂಡಲ ಹಿಡಿದು ಸತ್ತ ನವಿಲಿನ ಗರಿಯ ಪಿಂಛವನ್ನು ಹಿಡಿದು ಓಡಾಡುವುದೇತರ ಶುದ್ಧಾಚಾರ? ಗುರುಗಳಿಗೆ ತೊತ್ತೇಕೆ? ಸವಣರಿಗೆ ಮಿಥ್ಯ ತಾನೇಕೆ? ತಲೆಯನು ಬೋಳು ಮಾಡಿಕೊಂಡು ಜೈನ ನೆಟ್ಟನೆ ಸ್ವರ್ಗವೇರುವುದಾದರೆ ಸಾಣೆಕಲ್ಲು ಏಕೆ ಏರಬಾರದು? ಕಂಡ ಕಂಡ ಅಯ್ಯಗಳೆಲ್ಲ ಸ್ವರ್ಗಕ್ಕೇರಲು ಸ್ವರ್ಗವೇನು ಹೊಲದಲ್ಲಿ ಹಕ್ಕಿಗಳನ್ನು ಓಡಿಸಲೆಂದು ಹಾಕಿದ ಅಟ್ಟವೇ ಎಂದು ಪ್ರಶ್ನಿಸುತ್ತಾನೆ. ಹೀಗೆ ವಿವಿಧ ಧರ್ಮಗಳವರ ಡಂಬಾಚಾರ, ದುರಾಚಾಗಳನ್ನು ಖಂಡಿಸಿರುವ ಸರ್ವಜ್ಞ ಜನಸಾಮಾನ್ಯರ ಡಂಬಾಚಾರ,

ದುರಾಚಾಗಳನ್ನೂ ಅಲಕ್ಷಿಸಿಲ್ಲ ಅವುಗಳನ್ನು ಕಟುವಾಗಿ ಖಂಡಿಸಿದ್ದಾನೆ.

ಅನ್ನವಿಕ್ಕದವನನ್ನು 'ಅನ್ನವಿಕ್ಕದುಣ್ಣುತಿರ್ಪ ಕುಲಜ ತಾ ಕುನ್ನಿಯಿಂ ಕಷ್ಟ' ಎಂದು ಜರಿದಿದ್ದಾನೆ. ಪುಣ್ಯ ಕಾರ್ಯಕ್ಕೆ ತನ್ನ ಸಂಪತ್ತನ್ನು ಬಳಸದೆ ತಾನೂ ಅನುಭವಿಸದೆ ಗಳಿಸಿದ್ದನ್ನೆಲ್ಲ ಕೂಡಿಡುವ ಜಿಪುಣನನ್ನು ಕೆಚ್ಚಲ ಮೇಲಿನ ಉಣ್ಣೆ' ಎಂದು ತೆಗಳಿದ್ದಾನೆ. ದಾನಕೊಡುತ್ತೇನೆಂದು ಹೇಳಿಯೂಕೊಡದವನು ಅಧಮನೆಂದಿದ್ದಾನೆ. ಹುಸಿವವನಿಗಿಂತ ಐನೂರುಪಶುಗಳನ್ನು ಕೊಲ್ಲುವವ ಲೇಸು ಎಂದಿದ್ದಾನೆ. ಬಾಡ ತಿನ್ನುವವನನ್ನು 'ಬಾಡತಿಂಬುವವನಿಗೆ ಆಡೇನು? ಕುರಿಯೇನು? ಕೋಡಗವೇನು? ಕಡೆಯಲ್ಲಿ ತಾನೇಡಿ, ನಾಯೇನು' ಎಂದು ಗೇಲಿ ಮಾಡಿದ್ದಾನೆ. ಸತ್ತವರಿಗಾಗಿ ಅಳುವವರನ್ನು "ಸತ್ತವರಿಗತ್ತು ಬೇಸತ್ತವರುಳಿದರೆ? ಹತ್ತೆಂಟು ಕಾಲದೆಡೆಯ್ಯ ಅವರತ್ತಲೇ {ಸ್ಮಶನದತ್ತಲೇ } ನೋಡ" ಎಂದು ವಿಡಂಬಿಸಿದ್ದಾನೆ. ಹೀಗೆಯೇ ಅವನ ವಿಡಂಬನೆ ಮುಂದುವರಿಯುತ್ತದೆ. ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ ಜಾತಿ ವಿಜಾತಿಯೆನಬೇಡ ಶಿವನೊಲಿದನೇ ಜಾತ ಸರ್ವಜ್ಞ, ಮೇಲು-ಕೀಳೆಂಬ ಜಾತಿ ಮೆಟ್ಟಿಲುಗಳಿಂದ ಕೂಡಿರುವ ಸಮಾಜದಲ್ಲಿ ಜಾತಿ ಎನ್ನುವುದು ಮಾನವರೇ ಕಟ್ಟಿಕೊಂಡಿರುವ ಒಂದು ಸಾಮಾಜಿಕ ರಚನೆ. ಆದುದರಿಂದ ಜಾತಿ ಎಂಬುದು ಮಾನವನ ದೇಹದಲಿಲ್ಲ ಮನದಲ್ಲಿ ನೆಲೆಸಿದೆ. ಜಾತಿಯ ಕಾರಣಕ್ಕಾಗಿ ಯಾವುದೇ ವ್ಯಕ್ತಿಯನ್ನು ಮೆಚ್ಚಿಕೊಳ್ಳಬಾರದು ಇಲ್ಲವೆ ಕಡೆಗಣಿಸಬಾರದು ವ್ಯಕ್ತಿಯಲ್ಲಿರುವ ಒಳ್ಳೆಯ ನಡೆನುಡಿಗಳನ್ನು ಮಾತ್ರ ಗುರುತಿಸಬೇಕು" ಎಂಬ ಅರಿವನ್ನು ಮೂಡಿಸಲು ಕಣ್ಣ ಮುಂದಿನ ನಿಸರ್ಗದಲ್ಲಿ ಕಾಣುವ ಮತ್ತೆ ನಡೆಯುವ ಪ್ರಸಂಗಗಳಿಂದ ಹೇಳಲಾಗಿದೆ.

'ನಿತ್ಯ ನೇಮಗಳೇಕೆ ಮತ್ತೆ ಪೂಜೆಗಳೇಕೆ ನೆತ್ತಿ ಬೋಳೇಕೆ ಜಡೆಯೇಕೆ ಅರಿದು ನೆರೆಸತ್ಯ ಉಳ್ಳವನಿಗೆ ಸರ್ವಜ್ಞ ॥ ಆಡುವ ಮಾತು ಮತ್ತು ಕೈಗೊಂಡ ಕೆಲಸಗಳಲ್ಲಿ ಇತರರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಸತ್ಯವಂತನಾದ ವ್ಯಕ್ತಿಗೆ ದೇವರ ಬಗ್ಗೆ ತನ್ನಲ್ಲಿರುವ ಒಲವನ್ನು ತೋರಿಸಿಕೊಳ್ಳುವಂತಹ ಯಾವುದೇ ಬಗೆಯ ಉಡುಗೆ ತೊಡುಗೆ, ಆಚರಣೆಗಳ ಅಗತ್ಯವಿಲ್ಲವೆಂಬುದನ್ನು ಹೇಳಲಾಗಿದೆ. ಸರ್ವಜ್ಞ ಬಸವಾದಿ ಶರಣರಂತೆಯೇ ಜಾತಿಭೇದವನ್ನು ವಿರೋಧಿಸಿದ್ದಾನೆ.

> ಯಾತರ ಹೂವಾದರು। ನಾತರೆ ಸಾಲದೆ
> ಜಾತಿ-ವಿಜಾತಿಯೆನಬೇಡ-ಶಿವನೊಲಿ
> ದಾತನೇ ಜಾತಿ ಸರ್ವಜ್ಞ ॥

ಉತ್ತಮರೆಂದು ಬೀಗುವವರನ್ನು "ಉತ್ತಮರೆಂಬುವರ ಹುಟ್ಟು ಪಾಲ್ಗಡಲೊಳಗೇನು? ಎಲ್ಲರೂ ಹುಟ್ಟಿ ಬರುವುದು ಒಂದೇ ಕಡೆಯಿಂದ "ಎಂದು ಛೇಡಿಸಿದ್ದಾನೆ.

ನಡೆವುದೊಂದೆ ಭೂಮಿ, ಕುಡಿವುದೊಂದೆ ನೀರು ಸುಡುವುದೊಂದೆ ಅಗ್ನಿ -ಹೀಗಿರುವಾಗ ಜಾತಿಭೇದವೇಕೆ? ಎಂದು ಪ್ರಶ್ನಿಸಿದ್ದಾನೆ. ಮಲ-ಮೂತ್ರಗಳ ಸಂಗ್ರಹಾಲಯವಾದ ಎಲುಬಿನ ಗೂಡಾದ ಕ್ರಿಮಿಗಳ ನೆಲೆವಿಡಾದ ದೇಹಕ್ಕೆ ಕುಲವಾವುದು?" ಎಂದು ಕೇಳಿದ್ದಾನೆ. ಜಾತಿ ವಿಜಾತಿ ಎನಬೇಡ, ಯಾತರ ಹೂವಾದರೇನು? ನಾತರ ಸಾಲದೆ? ಶಿವನೊಲಿದಾತನದು ಉತ್ತಮ ಜಾತಿ. ಉತ್ತಮ ಜಾತಿಯಲ್ಲಿ ಹುಟ್ಟಿ ಭೂತೇಶ ಶರಣೆನ್ನದಾತನೇ ಮಾದಿಗ ಎಂದು ನಿರೂಪಿಸಿ ಜಾತಿ ನಿರ್ಧಾರವಾಗುವುದು ಹುಟ್ಟಿನಿಂದಲ್ಲ ಆಚಾರದಿದ ಎಂದು ಸ್ಪಷ್ಟಪಡಿಸಿದ್ದಾನೆ. ಸರ್ವಜ್ಞ ನೀತಿ ಹೇಳುವುದಕ್ಕಿಂತ ಹೆಚ್ಚಾಗಿ ವ್ಯಕ್ತಿ ಹಾಗೂ ಸಮಾಜದ ಅಂಕುಡೊಂಕುಗಳನ್ನೂ, ಡಂಬಾಚಾರಗಳನ್ನೂ ವಿಡಂಬಿಸಿ ಖಂಡಿಸಿದ್ದಾನೆ. ಅವನ ವಿಡಂಬನೆ, ಖಂಡನೆಗಳ ಉದ್ದೇಸ ತೆಗಳಿ ಅಪಹಾಸ್ಯ ಮಾಡುವುದಲ್ಲ, ತಿದ್ದುವುದು ಹಾಗೂ ಸುಧಾರಿಸುವುದು. ಕೆಡಕನ್ನು ಕಂಡಾಗ ಕೆರಳಿ ಖಂಡಿಸಿರುವ ಆತ ಒಳಿತನ್ನು ಕಂಡಾಗ ತಲೆಬಾಗಿ ಗೌರವ ಸಲ್ಲಿಸಿದ್ದಾನೆ.

ಜೈನರ, ದ್ವಿಜರ ಡಂಬಾಚಾರಗಳನ್ನು ಕಟುವಾಗಿ ಖಂಡಿಸಿದ್ದರೂ "ದಾರವಿದ್ದರೆ ಮುತ್ತು ಹಾರವೆಂದೆನಿಸಿತ್ತು । ಅರಿದು ನಡೆವ ದ್ವಿಜರುಗಳ ಸಂಸರ್ಗ ಅದರಿಂದಲೂ ಅಧಿಕ" ಎಂದು ಸನ್ಮಾರ್ಗಿಗಳಾದ ದ್ವಿಜರಿಗೂ "ಕೊಲ್ಲುವ ಧರ್ಮವನೊಯ್ದು ಒಲೆಯೊಳಗಿಕ್ಕುವುದು । ಕೊಲಲಾಗದು ಎಂಬ ಜಿನರ ಮತ ಎನ್ನ ತಲೆಯ ಮೇಲಿರಲಿ" ಎಂದು ಜಿನಧರ್ಮಕ್ಕೂ ಗೌರವ ಸಲ್ಲಿಸಿರುವುದೇ ಇದಕ್ಕೆ ಸಾಕ್ಷಿ. ಹಾಗೆಯೇ "ಮಾಯದ ಅಗ್ನಿಯೊಡನುಂಡ ಸ್ತ್ರೀಯೆಂಬ ನಾಯಿ ನೆಚ್ಚುವರೆ? ಎಂದು ಅವಗುಣಿ ಸ್ತ್ರೀ ಎಂದು ತೆಗಳಿದ್ದರೂ "ನಾರಿ ಪತಿಹಿತವೆಂದು ನಡೆದರೆ ಊರೆ ಸ್ವರ್ಗದ ದಾರಿ ತೋರುವಳು" ಎಂದು ಸದ್ಗುಣಿಯಾದ ನಾರಿಗೆ ಮಣಿದಿದ್ದಾನೆ. "ಹುಸಿವವನು ಐನೂರು ಪಶುಗಳನ್ನು ಹತ್ಯೆ ಮಾಡಿದವನಿಗಿಂತ ಅಧಮ" ಎಂದು ತೆಗಳಿದ್ದರೂ ಅವನು ಸತ್ಯವಂತನಾದರೆ ಅವನಿಗೆ ಧರೆಯೆಲ್ಲ ತಲೆಬಾಗಿ ನಮಸ್ಕರಿಸುತ್ತದೆ ಎಂದು ಹೆತ್ತಾಯಿ ಮಗನನ್ನು ಕರೆದುಕೊಳ್ಳುವಂತೆ ಸ್ವರ್ಗದವರು ಅವನನ್ನು ಇತ್ತ ಬಾ ಎಂದು ಸ್ವರ್ಗಕ್ಕೆ ಕರೆದುಕೊಳ್ಳುತ್ತಾರೆ ಎಂದು ನಿರೂಪಿಸಿ ಸತ್ಯವಂತ ದೇವಮಾನ್ಯನಾಗುತ್ತಾನೆ ಎಂದು ಸ್ಪಷ್ಟಪಡಿಸಿದ್ದಾನೆ.

**ಉಪಸಂಹಾರ**

ಈ ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ ಸರ್ವಜ್ಞನ ತ್ರಿಪದಿಗಳು ತಾತ್ವಿಕ ಚಿಂತನೆ, ನೈತಿಕ ಮಾರ್ಗದರ್ಶನ ಹಾಗೂ ಸಾಮಾಜಿಕ ಅರಿವುಗಳಿಂದ ಕೂಡಿವೆ. ಜನಸಾಮಾನ್ಯರು ಅರ್ಥಮಾಡಿಕೊಳ್ಳಬಹುದಾದ ಭಾಷೆ ಬಳಸುವ ಮೂಲಕ ಹಾಸ್ಯ, ತೀಕ್ಷಣತೆ ಮತ್ತು ತಾತ್ವಿಕ ತೇಜಸ್ಸನ್ನು ಒದಗಿಸಿತ್ತಾನೆ. ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ಅಸಭ್ಯತೆಯ ಬೇಜಾಬ್ದಾರಿ ವಿಡಂಬನೆಯನ್ನು ಮಾಡದೆ; ಬದಲಿಗೆ ಜ್ಞಾನಪೂರ್ಣ ನೈತಿಕತೆಯಿಂದ ಕೂಡಿದ ವ್ಯಂಗ್ಯವನ್ನು ಬಳಸುತ್ತಾನೆ. ಈ ಶೈಲಿಯ ಮೂಲಕ ಸಮಾಜದ ಎಲ್ಲ ವರ್ಗದ ಜನರಿಗೆ ಧರ್ಮ, ನೀತಿ, ಸತ್ಯ ಎಂಬ ಸ್ಫೂರ್ತಿದಾಯಕ ಸಂದೇಶವನ್ನು ತೀರ್ವವಾಗಿ ತಲುಪಿಸಿದ್ದಾನೆ. ಅಂತಿಮವಾಗಿ ಹೇಳಬೇಕೆಂದರೆ ಸರ್ವಜ್ಞನ ವಿಡಂಬನೆ ಕೇವಲ ವಿಮರ್ಶೆಯ ಶಾಸ್ತ್ರವಲ್ಲ ಅದು ಜ್ಞಾನ, ಜಾಗೃತಿ ಮತ್ತು ನೈತಿಕ ಎಚ್ಚರಿಕೆಗೆ ಬಳಸಲಾದ ಚಿಂತನಾತ್ಮಕ ಉಪಕರಣ. ಈ ಮೂಲಕ ಅವನು ಕನ್ನಡ ನಾಡಿನ ಜನರಿಗೆ ಕೇವಲ ತ್ರಿಪದಿಗಳ ಪುಂಜವನ್ನಷ್ಟೇ ನೀಡಿಲ್ಲ ಬದಲಿಗೆ ಜೀವನದ ದಾರಿದೀಪವನ್ನೂ ನೀಡಿದ್ದಾನೆ ಈ ದೃಷ್ಟಿಯಿಂದ ಸರ್ವಜ್ಞ ಒಬ್ಬ ಸಮಾಜ ಸುಧಾರಕನಾಗಿದ್ದಾನ.

**ಪರಾಮರ್ಶನ ಗ್ರಂಥಗಳು:**

1. ಸರ್ವಜ್ಞನ ವಚನಗಳು-ಪ್ರೊ. ಎಲ್ ಬಸವರಾಜು
2. ಸರ್ವಜ್ಞ ಮೂರ್ತಿಯ ವಚನಗಳು-ಭಿಮಭಟ್ಟ ಶಂಕರಭಟ್ಟಪೂಜಾರ

1. ಸಾರ್ಥಕತೆಯ ಸಾಧಕ ಸರ್ವಜ್ಞ–ಜ. ಹೊ. ನಾರಾಯಣಸ್ವಾಮಿ
3. ಸರ್ವಜ್ನ ತ್ರಿಪದಿಗಳಲ್ಲಿ ತಾತ್ವಿಕ ವಿಶ್ಲೇಷಣೆ–ಪ್ರೊ.ಎಲ್ ಬಸವರಾಜು
4. ಸರ್ವಜ್ಞ–ಒಂದು ಅಧ್ಯಯನ–ಡಾ.ಎಮ್ ಚಿದಾನಂದಮೂರ್ತಿ
5. ಸರ್ವಜ್ಞ ವಚನ ಸಂಗ್ರಹ –ಡಾ.ಎಚ್. ಎಮ್ ನಯಕುಮಾರ